ಅಧ್ಯಕ್ಷರು.—ಅವತು ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರಲ್ಲ.....

ಶ್ರೀ ಡಿ. ಟಿ. ಜಯಕುಮಾರ್.—ಕಂಪ್ಲೈಂಟ್ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಾರೆ. ಡಿಸ್ಟಿಲರಿ ಕಂಪನಿ ವಿರುದ್ಧ ಕೋರ್ಟಿನಲ್ಲಿ ಪ್ರೈವೇಟ್‌ನವರು ಕಂಪ್ಲೈಂಟ್ ಮಾಡಿದ್ದಾರೆ. ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ.

ಅಧ್ಯಕ್ಷರು.—ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ, ಆಗ ಹೇಳಿ.....

ಶ್ರೀ ಡಿ. ಟಿ. ಜಯಕುಮಾರ್.—ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

೨-೦೦ ಪಿ.ಎಂ.

ಶ್ರೀ ಎಂ. ರಾಮಪ್ಪ.—ಇಲ್ಲಿ ಸರ್ಕಾರ ಅಂದರೆ ಜಯಕುಮಾರ್‌ರವರೆ ಅಥವಾ ಮಂತ್ರಿ ವರ್ಯರೇ? ಅದು ಏನಾದರೂ ಇದ್ದರೆ ಹೇಳಿ,, ಹೊರಗಡೆ ಬರಲಿ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಪುತ್ತೂರಿನಲ್ಲಿ ನಿರ್ಮಿಸಲಾಗಿರುವ ಮಾರುಕಟ್ಟೆಗೆ ಸುಮಾರು ಆರೇಳು ಕಿಲೋಮೀಟರುಗಳಷ್ಟು ಬಳಸಿ ಹೋಗಬೇಕಾಗಿದ್ದು ಅದರಿಂದ ರೈತರಿಗೆ ಆಗಿರುವ ತೊಂದರೆ ಹಾಗೂ ಸದರಿ ಮಾರುಕಟ್ಟೆಗೆ ರಸ್ತೆ ನಿರ್ಮಾಣ ಮಾಡುವವರೆಗೆ ಹಾಲಿ ಪುತ್ತೂರು ಪೇಟೆಯಲ್ಲಿರುವ ಹಳೆ ಮಾರುಕಟ್ಟೆ ಕೇಂದ್ರವನ್ನೇ ಅಧಿಕೃತ ಮಾರುಕಟ್ಟೆ ಕೇಂದ್ರವನ್ನಾಗಿ ಪರಿಗಣಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಗ್ರಾಮಾಭಿವೃದ್ಧಿ ಪಂಚಾಯ್ತಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಇದನ್ನು ಸೋಮವಾರ ತೆಗೆದು ಕೊಳ್ಳೋಣ.

ಅಧ್ಯಕ್ಷರು.—ಇದನ್ನು ಸೋಮವಾರ ತೆಗೆದುಕೊಳ್ಳೋಣ. ಈಗ ಜೆ. ಹೆಚ್. ಪಟೇಲರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಅವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ ಅದು ಮೊದಲೇ ಪೇಪರಿನಲ್ಲಿ ಬಂದು ಬಿಟ್ಟಿದೆ.

ತುಂಗಭದ್ರಾ ಅಚ್ಚುಕಟ್ಟಿನ ಬೆಳೆಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಮಂತ್ರಿಯವರಿಂದ ಹೇಳಿಕೆ

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ವಿವಿಧೋದ್ದೇಶ ಆಂತರ ರಾಜ್ಯ ಯೋಜನೆಯು ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನೀರಾವರಿ ಮತ್ತು ಜಲವಿದ್ಯುತ್ ಅವಶ್ಯಕತೆಗಳನ್ನು ಪೂರೈಸುತ್ತದೆ. ಸಾಧಾರಣ ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ೨೩೦ ಟಿಎಂಸಿ ನೀರನ್ನು ಉಪಯೋಗಿಸಲು ಅವಕಾಶವಿದೆ. ಆದರೆ ಈ ವರ್ಷ ದೊರಕಬಹುದಾದ ನೀರು ಕೇವಲ ೧೭೪ ಟಿ. ಎಂ. ಸಿ. ಎಂದು ಅಂದಾಜು ಮಾಡಲಾಗಿದೆ. ಅಂದರೆ, ಸಾಧಾರಣ ವರ್ಷದಲ್ಲಿ ದೊರೆಯುವ ನೀರಿಗಿಂತ ೫೬ ಟಿ. ಎಂ. ಸಿ. ಯಷ್ಟು ಕಡಿಮೆ ನೀರು ದೊರೆಯುತ್ತದೆ. ಸಾಧಾರಣ ವರ್ಷದಲ್ಲಿ ಕರ್ನಾಟಕ ರಾಜ್ಯಕ್ಕೆ ದೊರೆಯಬಹುದಾದ ಸುಮಾರು ೧೫೧ ಟಿ. ಎಂ. ಸಿ. ನೀರಿಗೆ ಬದಲಾಗಿ, ಈ ವರ್ಷ ದೊರೆಯುವ ನೀರಿನ ಪ್ರಮಾಣವು ಸುಮಾರು ೧೦೫ ಟಿ. ಎಂ. ಸಿ. ಅಂದರೆ ೪೬ ಟಿ. ಎಂ. ಸಿ. ಕಡಿಮೆ.

ತುಂಗಭದ್ರಾ ಯೋಜನೆಯಡಿಯಲ್ಲಿ ಹಾಲಿ ನಿಂತಿರುವ ಬೆಳೆಗಳ ವಿವರಗಳು ಈ ರೀತಿ ಇದೆ :

೧)	ಎಡದಂಡೆ ನಾಲೆ	...	೨,೭೪,೦೦೦ ಎಕರೆ
೨)	ಬಲಂದಂಡೆ ನಾಲೆ	...	೭೩,೫೦೦ ,,
೩)	ವಿಜಯನಗರ ನಾಲೆಗಳು	...	೨೪,೧೯೦ ,,
			ಒಟ್ಟು ೩,೭೧,೬೯೦ ,,

ರಾಜೋಲಿ ಬಂಡ
ನಾಲಾ ಯೋಜನೆ ... ೧೦,೬೦೦ ,,

ಒಟ್ಟು ೩,೮೨,೨೯೦ ಎಕರೆಗಳು

ಈ ಬೆಳೆಗಳಿಗೆ ಬೇಕಾಗುವ ನೀರಿನ ಮೊತ್ತ ೧೯.೨೨ ಟಿ. ಎಂ. ಸಿ.

ದಿನಾಂಕ ೧೯ನೇ ಮಾರ್ಚ್ ೧೯೮೯ ರಂದು ತುಂಗಭದ್ರಾ ಜಲಾಶಯದಲ್ಲಿ ಕರ್ನಾಟಕದ ಪಾಲಿನ ನೀರು ಕೇವಲ ೯.೧೭ ಟಿ. ಎಂ. ಸಿ. ಇತ್ತು. ಆದುದರಿಂದ ಆಂಧ್ರ ಪ್ರದೇಶದ ನೀರನ್ನು ಸ್ವಲ್ಪ ವಾದರೂ ನಮಗೆ ದೊರಕಿಸುವಂತೆ ಅಧಿಕಾರಿ ಮಟ್ಟದಲ್ಲಿ, ನಂತರ ಮಂತ್ರಿಗಳ ಮಟ್ಟದಲ್ಲಿ ಹೈದರಾಬಾದಿನಲ್ಲಿ ಚರ್ಚಿಸಲಾಯಿತು. ಆವರ ರಾಜ್ಯದಲ್ಲಿ ತುಂಗಭದ್ರಾ ಬಲದಂಡೆ ಕೆಳಮಟ್ಟವ ನಾಲೆಯಿಂದ ಮತ್ತು ಕರ್ನೂಲ್ ಮತ್ತು ಕಡಪ ನಾಲೆಯ ಕೆಳಗೆ ಬೆಳೆದು ನಿಂತಿರುವ ಬೆಳೆಗಳಿಗೆ ಆವರ ಪಾಲಿನ ನೀರು ಸಾಕಾಗದೇ ಇರುವ ಪರಿಸ್ಥಿತಿ ಇರುವುದರಿಂದ, ಆವರು ನಮಗೆ ನೀರು ಕೊಡುವ ಸ್ಥಿತಿಯಲ್ಲಿಲ್ಲ ಎಂದು ತಿಳಿಸಿದರು. ಉಳಿದಿದ್ದ ಮಾರ್ಗ ಕೇವಲ ಭದ್ರಾ ಜಲಾಶಯದಲ್ಲಿ ಆದರ ಆಚ್ಚುಕಟ್ಟಿಗೆ ಧಕ್ಕೆಯಾಗದ ರೀತಿಯಲ್ಲಿ ತುಂಗಭದ್ರಾ ಜಲಾಶಯಕ್ಕೆ ನೀರು ಬಿಡಿಸಿಕೊಳ್ಳುವುದು ಒಂದೇ. ಈ ದಿಶೆಯಲ್ಲಿ ದಿನಾಂಕ ೧೮ನೇ ಮಾರ್ಚ್ ೧೯೮೯ ರಂದು ಮುನಿರಾಬಾದ್‌ನಲ್ಲಿ ತುಂಗಭದ್ರಾ ಯೋಜನೆಯ ನೀರಾವರಿ ಸಮಾಲೋಚನಾ ಸಮಿತಿಯ ಸಭೆ ಕರೆಯಲಾಗಿತ್ತು. ಕಂದಾಯ ಮಂತ್ರಿ ಶ್ರೀಯುತ ಜೆ. ಹೆಚ್. ಪಟೇಲರು, ಗ್ರಾಮಾಭಿವೃದ್ಧಿ ಮಂತ್ರಿ ಶ್ರೀ ಎಂ. ಪಿ. ಪ್ರಕಾಶ್‌ರವರು ಹಾಗೂ ಮಹಿಳಾ ಮತ್ತು ಶಿಶು ಕಲ್ಯಾಣ ರಾಜ್ಯ ಮಂತ್ರಿಗಳಾದ ಶ್ರೀಮತಿ ಡಾಕ್ಟರ್ ಪುಷ್ಪಾವತಿಯವರು ಸಹ ಸಭೆಯಲ್ಲಿ ಪಾಲ್ಗೊಂಡಿದ್ದರು. ಪೀರ್ಘ ಚರ್ಚೆಯಾದ ನಂತರ ಕಂದಾಯ ಮಂತ್ರಿಗಳು ಭದ್ರಾ ಯೋಜನೆ ನೀರಾವರಿ ಸಮಾಲೋಚನಾ ಸಮಿತಿಯಲ್ಲಿ ಚರ್ಚಿಸಿ ಎಷ್ಟರಮಟ್ಟಿಗೆ ತುಂಗಭದ್ರಾ ಆಚ್ಚುಕಟ್ಟಿನ ರೈತರುಗಳಿಗೆ ಸಹಾಯ ಮಾಡಬಹುದೆಂಬುದನ್ನು ತಿಳಿದು ನಂತರ ನೀರು ಬಿಡಿಸಲು ಕ್ರಮ ತೆಗೆದು ಕೊಳ್ಳುವುದಾಗಿ ತಿಳಿಸಿದರು.

ದಿನಾಂಕ ೨೧ನೇ ಮಾರ್ಚ್ ೧೯೮೯ ರಂದು ಬೆಂಗಳೂರಿನಲ್ಲಿ ಭದ್ರಾ ಯೋಜನಾ ನೀರಾವರಿ ಸಮಾಲೋಚನಾ ಸಮಿತಿಯ ಸಭೆ ಕರೆಯಲಾಗಿತ್ತು. ನಾನೂ, ಸಚಿವರಾದ ಜೆ. ಹೆಚ್. ಪಟೇಲರೂ, ಎಂ. ಪಿ. ಪ್ರಕಾಶ್‌ರವರೂ, ಶ್ರೀಮತಿ ಡಾಕ್ಟರ್ ಪುಷ್ಪಾವತಿಯವರೂ ಲೋಕಸಭಾ ಸದಸ್ಯರಾದ ಶ್ರೀಮತಿ ಬಸವರಾಜೇಶ್ವರಿಯವರು, ಶ್ರೀ ಎಚ್. ಜಿ. ಶ್ರೀರಾಮುಲುರವರು, ಭದ್ರಾ ಸಮಾಲೋಚನಾ ಸಮಿತಿಯ ಸದಸ್ಯರು ಅಲ್ಲದೆ ರಾಯಚೂರು ಮತ್ತು ಬಳ್ಳಾರಿ ಜಿಲ್ಲಾ ಶಾಸಕರೆಲ್ಲರೂ ಹಾಜರಿದ್ದರು. ಸುಧೀರ್ಘ ಚರ್ಚೆಯ ನಂತರ ಭದ್ರಾ ಆಚ್ಚುಕಟ್ಟಿಗೆ ಧಕ್ಕೆಯಾಗದಂತೆ, ಮೇ ೧೫ರ ತನಕ ಬೇಕಾಗುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು, ಹೆಚ್ಚಿನ ನೀರಿದ್ದರೆ ಅದನ್ನು ತುಂಗಭದ್ರಾ ಜಲಾಶಯಕ್ಕೆ ಬಿಡಲು ತೀರ್ಮಾನಿಸಲಾಯಿತು.

ಈಗ ಭದ್ರಾ ಮತ್ತು ತುಂಗಭದ್ರಾ ಜಲಾಶಯಗಳಲ್ಲಿ ದೊರಕುವ ನೀರು ಬಹಳ ಕಡಿಮೆ ಇದ್ದು, ಇರುವ ನೀರನ್ನು ಎಲ್ಲಾ ಕ್ರಮಗಳನ್ನು ತೆಗೆದು ಕೊಂಡು ಮಿತವಾಗಿ ಬಳಸಬೇಕಾದ್ದು ಅತಿ ಅವಶ್ಯಕ. ಈ ದಿಸೆಯಲ್ಲಿ ಎರಡೂ ಕಡೆ ON ಮತ್ತು OFF ಪದ್ಧತಿ ಅನುಸರಿಸುವುದು ಸಹ ಅನಿವಾರ್ಯ. ಹೀಗೆ ಮಾಡಿದಲ್ಲಿ ಭದ್ರಾ ಜಲಾಶಯದಿಂದ ಸುಮಾರು ೨.೫ ಟಿ. ಎಂ. ಸಿ. ನೀರು ಬಿಡಲು ಸಾಧ್ಯವಾಗುತ್ತದೆಂದು ವಿದಿತವಾಗಿದೆ. ಈ ನೀರನ್ನು ಮಿತವಾಗಿ ಬಳಸಿ ಆದಷ್ಟು ದಿನ ತುಂಗಭದ್ರಾ ಆಚ್ಚುಕಟ್ಟಿನ ರೈತರಿಗೆ ನೀರು ಸರಬರಾಜು ಮಾಡುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಈ ವ್ಯವಸ್ಥೆಗೆ ಎಲ್ಲಾ ಸದಸ್ಯರ ಮತ್ತು ರೈತ ಬಾಂಧವರ ಸಹಕಾರವನ್ನು ಕೋರುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ. ನನ್ನ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ತಾವು ತೀರ್ಮಾನ ಕೊಡುತ್ತೇನೆಂದು ಹೇಳಿದ್ದಿರಿ.

(ಗೊಂದಲ)

ಅಧ್ಯಕ್ಷರು.—ನಾನು ಬೆಳಿಗ್ಗೆ ೯ ಗಂಟೆಗೆ ಬಂದು ಕುಳಿತದ್ದು. ಇದುವರೆಗೆ ನಾನು ಎದ್ದು ಒಳಗೆ ಹೋಗಿಲ್ಲ. ಪ್ಯಾನೆಲ್ ಛೇರ್‌ಮನ್ ಆವರನ್ನು ಇಲ್ಲಿ ಕೂರಿಸಿ ನಾನು ಒಳಗಡೆ ಹೋದಮೇಲೆ ಆವರನ್ನು ಕರೆಸಿ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇದನ್ನು ಸೋಮವಾರ ತೆಗೆದುಕೊಳ್ಳಿ ಈಗ ಬಡ್ಜೆಟ್ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು.—ಇದು ಸೋಮವಾರದ ದಿವಸ ಮುಗಿಯಬೇಕಾಗುತ್ತದೆ. ಈ ಹೌಸಿಂಗ್ ಸೊಸೈಟೀಸ್‌ದು ಮಂಗಳವಾರ ಬೇಕಾದರೆ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಈಗ ಬಡ್ಜೆಟ್ ಡಿಸ್‌ಕಷನ್ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಹಾಗಾದರೆ ಈಗ ಷಿಳಿ ರ ನೋಟೀಸ್‌ಗಳನ್ನು ಮುಂದೆ ಹಾಕೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ರೂಲ್ ೬೮ ರ ಪ್ರಕಾರ ತೆಗೆದುಕೊಳ್ಳತಕ್ಕಂಥ ಚರ್ಚೆ ಸೋಮವಾರ ಎಂದು ನಿರ್ಣಯ ಆಗಿತ್ತು, ಈಗ ಮತ್ತೆ ಮಂಗಳವಾರ ಎಂದು ಏತಕ್ಕೆ ಮುಂದೆ ಹಾಕುತ್ತೀರಾ.

ಅಧ್ಯಕ್ಷರು.—ಸೋಮವಾರ ಬಹಳ ಬಿಸಿನೆಸ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಇದೂ ಇಂಪಾರ್ಟೆಂಟ್ ಬಿಸಿನೆಸ್.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಬಿಸಿನೆಸ್ ಅಡ್ವೈಜರಿ ನಿರ್ಣಯದಂತೆ ಚರ್ಚೆ ಮುಗಿಯದೇ ಹೋದರೆ ಸೋಮವಾರ ಪ್ರಾರಂಭದಲ್ಲಿ ಉಳಿದ ಸದಸ್ಯರಿಗೆ ಅವಕಾಶ ಕೊಡಬೇಕೆಂದು ತದನಂತರ ಮುಖ್ಯಮಂತ್ರಿಯವರು ಚರ್ಚೆಗೆ ಉತ್ತರ ಕೊಡಬೇಕೆಂದು ತೀರ್ಮಾನ ಆಗಿರುವುದು ಒಂದು ಭಾಗ. ಇದು ಆದಮೇಲೆ ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆಗುತ್ತವೆ ಅನಂತರ ಸಪ್ಲಿಮೆಂಟರಿ ಗ್ರ್ಯಾಂಟ್ಸ್ ಆಗಬೇಕು. ಇಷ್ಟೆಲ್ಲಾ ಆಗಬೇಕು ಎಂದು ನಿರ್ಣಯ ಮಾಡಿದ್ದೇನೆ. ಸೋಮವಾರ ಇದನ್ನೆಲ್ಲಾ ಮುಗಿಸೋಣ. ಉಳಿದಿರುವುದು ಟ್ಯಾಕ್ಸೇಷನ್ ಬಿಲ್. ಎರಡು ಮೂರು ಆರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಬಿಲ್ಸ್ ಇದೆ. ಸೋಮವಾರ ೨೭, ಮಂಗಳವಾರ ೨೮, ಬುಧವಾರ ೨೯, ಗುರುವಾರ ೩೦, ಶುಕ್ರವಾರಕ್ಕೆ ಎಲ್ಲವನ್ನೂ ಮುಗಿಸಬೇಕಾಗುತ್ತದೆ. ಈ ಸಮಯವನ್ನು ನಾವು ನೆಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ತಾವು ಇದನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ತೆಗೆದುಕೊಳ್ಳಿ. ಅದಕ್ಕೋಸ್ಕರ ಒಂದು ಸಲಹೆಯನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಸೋಮವಾರ ಕಾನೂನು ಪ್ರಕಾರ ಸರ್ಕಾರ ನಡೆಸಬೇಕಾದಂತಹ ಅತ್ಯಗತ್ಯವಾಗಿ ಆಗಬೇಕಾದಂತಾದ್ದು ಮುಗಿಸೋಣ. ಮಂಗಳವಾರ ದಿಂದ ನೀವು ಹೇಳುವಂಥ ವಿಚಾರ ತೆಗೆದುಕೊಳ್ಳೋಣ. ಟ್ಯಾಕ್ಸೇಷನ್ ಬಿಲ್ಸ್, ಆರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಬಿಲ್ಸ್ ತೆಗೆದುಕೊಳ್ಳೋಣ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ತಾವು ಒಳಗೆ ಕರೆದು ತಮ್ಮ ಛೇಂಬರ್‌ನಲ್ಲಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನಾನು ಒಳಗೆ ಹೋದಮೇಲೆ ನಾನು ಸಂಬಂಧಪಟ್ಟವರನ್ನು ಕರೆಸಿ ಮಾತನಾಡುತ್ತೇನೆ. ಈಗ ೨೭ನೇ ತಾರೀಖು ಎಲ್ಲಾ ಮುಗಿದ ಮೇಲೆ ತೆಗೆದುಕೊಳ್ಳೋಣ. ಇಲ್ಲ ಅಂದರೆ ೨೮ನೇ ತಾರೀಖು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದುದು ಎಂದರೆ ಈ ಸದನದ ಮುಂದೆ ರಿಪೋರ್ಟ್‌ನ್ನು ಇಡುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು.—ಎಲ್ಲಕ್ಕಿಂತ ಮುಖ್ಯವಾದುದು ಎಂದರೆ, ಬಿಲ್ ಆನ್ ಅಕೌಂಟ್ ಇದು ಆಗಬೇಕು. ನೀವು ಸೀನಿಯರ್ ಮೋಸ್ಟ್ ಮೆಂಬರ್ ನೀವು ಸಹಕರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅತುರಾತುರವಾಗಿ ಏತಕ್ಕೆ ಮಾಡುತ್ತೀರಿ ? ಇನ್ನೂ ಹೆಚ್ಚಿಗೆ ದಿವಸ ಕೂರಬಹುದಲ್ಲಾ. ಆರ್ಜೆಂಟಾಗಿ ಮಾಡಬೇಕೆಂದು ಕಿವಿತ್ತಾಟ್ ಡಿಸ್ಕಷನ್ ಪಾಸ್ ಮಾಡಬೇಕೆ ? ೧೦೦ ದಿವಸ ಅಧಿವೇಶನ ನಡೆಸಬೇಕೆಂದು ನೀವೇ ಹೇಳುತ್ತಿದ್ದೀರಿ, ನಿಮ್ಮ ಕಾಲದಲ್ಲೇ ೧೮೦ ದಿವಸ ಅಧಿವೇಶನವನ್ನು ನಡೆಸಿ.....

ಅಧ್ಯಕ್ಷರು.—ಈಗ ಬಜೆಟ್ ಡಿಸ್ಕಷನ್ ಆಗಲಿ.....

ಶ್ರೀ ಎಂ. ಎಸ್. ನಾರಿಯಣರಾವ್.—ಸೊಸೈಟಿ ವಿಚಾರವನ್ನು ಸೋಮವಾರ ಮಧ್ಯಾಹ್ನ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಅದನ್ನು ೨೮ನೇ ತಾರೀಖು ತೆಗೆದುಕೊಳ್ಳೋಣ. ಈಗ ಆಯವ್ಯಯದಮೇಲೆ ಚರ್ಚೆ ಪ್ರಾರಂಭವಾಗಲಿ. ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ.

ವಿತ್ತೀಯ ಕಾರ್ಯಕಲಾಪಗಳು
೧೯೮೯-೯೦ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ೧೯೮೯-೯೦ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದವರು ಏನು ಆಯವ್ಯಯವನ್ನು ಈ ಸದನದಮುಂದೆ ಮಂಡಿಸಿದ್ದಾರೆ ಇದನ್ನು ನೋಡಿದರೆ ಈ ರಾಜ್ಯದ ಬಡ ಜನರ ಪರವಾದ ಯೋಜನೆಗಳನ್ನು ರೂಪಿಸಿ, ಆರ್ಥಿಕ ಸಂಪನ್ಮೂಲವನ್ನು ಮಾಡಿ, ರಾಜ್ಯದ ರೈತರ ಪಾಲಿಗೆ, ನಿರುದ್ಯೋಗಿ ಯುವಕರ ಪಾಲಿಗೆ ಒಂದು ಹೊಸ ಬೆಳಕು, ಸಿಕ್ಕಬಹುದೆಂದು ಜನರು ಭಾವಿಸಿದ್ದರು. ಆದರೆ ಈ ಬಜೆಟ್‌ನ್ನು ನೋಡಿದಮೇಲೆ ರಾಜ್ಯದ ರೈತರ ಪಾಲಿಗೆ, ನಿರುದ್ಯೋಗಿ ಯುವಕರ ಪಾಲಿಗೆ, ಮಧ್ಯಮ ವರ್ಗದ ಜನರ ಪಾಲಿಗೆ ಈ ಸರ್ಕಾರ ಇನ್ನು ಬರುಕಿದೆಯೇ ಎಂಬ ಭಾವನೆ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಒಂದೇ ಒಂದು ಸ್ವಾಗತಾರ್ಹ ವಿಚಾರ ಎಂದರೆ ಮಹಿಳೆಯರಿಗೆ ಪೋಲೀಸ್ ಇಲಾಖೆಯಲ್ಲಿ ೧೦ ಪರ್ಸೆಂಟ್ ಹುದ್ದೆಗಳನ್ನು ಮೀಸಲಿರಿಸಲಾಗಿದೆ ಎಂಬುದು. ಇದು ಸ್ವಾಗತಾರ್ಹವಾದರೂ ಕೇವಲ ೧೦ ಪರ್ಸೆಂಟ್‌ನ್ನು ಮಾತ್ರ ಮೀಸಲಿಟ್ಟರೆ ಸಾಲದು. ಇವತ್ತು ರಾಜ್ಯದಲ್ಲಿನ ಯುವಜನರಲ್ಲಿ ನಿರುದ್ಯೋಗ ಎಂಬುದು ತಾಂಡವಾಡುತ್ತಿದೆ. ಲಕ್ಷೆಗಟ್ಟಲೆ ಯುವಕರು ಕೆಲಸವಿಲ್ಲದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಸರ್ಕಾರದ ಎಲ್ಲ ಇಲಾಖೆಗಳಲ್ಲೂ ಬಹಳಷ್ಟು ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇರುವುದರಿಂದ ಆ ಎಲ್ಲಾ ಇಲಾಖೆಗಳಲ್ಲೂ ಈ ಯುವಕರಿಗೆ ೧೦ ಪರ್ಸೆಂಟ್ ಮೀಸಲಾತಿಯನ್ನು ಇಡಬೇಕು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕ ಮಹಿಳಾ ಕೃಷಿಕಾರ್ಮಿಕರಿಗೂ ತಾವು ಅನುಕೂಲ ಮಾಡಿಕೊಡಬೇಕು. ಅವರ ಜೀವನ ಸುಗಮವಾಗಿ ಸಾಗಲು ಒಂದು ಭದ್ರ ಬುನಾದಿಯನ್ನು ಮಾಡಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಲಾಖಾವಾರು ಚರ್ಚೆಗೆ ಅವಕಾಶವಿಲ್ಲದಿರುವುದರಿಂದ ನಾನು ವಿಪರವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಬಜೆಟ್ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಬಹುದು ಅದೇನೆಂದರೆ ಇದು ಒಂದು ರೈತ ವಿರೋಧಿ ಬಜೆಟ್, ಇದು ಒಂದು ಹರಿಜನ ಗಿರಿಜನ ವಿರೋಧಿ ಬಜೆಟ್ ಎಂದು. ಇದಕ್ಕೆ ಪೂರಕವಾಗಿ ಕೆಲವು ಸಂಗತಿಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ಕಳೆದ ಸಾರಿ ಆದ ಮಳೆಯಿಂದಾಗಿ ಬಿಜಾಪುರ, ಗುಲ್ಬರ್ಗಾ, ಮುಂತಾದ ಕಡೆಗಳಲ್ಲಿ ಇಟ್ಟಿದ್ದ ಹಿಂಗಾರು ಮುಂಗಾರು ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಒಂದು ಮಾತನ್ನು ಮಾತ್ರ ಏನು ಹೇಳಿದ್ದಾರೆಂದರೆ ನಾವು ೨೮೫.೭೧ ಕೋಟಿ ರೂಪಾಯಿಗಳಷ್ಟು ನೆರವನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೆವು ಆದರೆ ಅವರು ನಮ್ಮ ರಾಜ್ಯಕ್ಕೆ ಕೇವಲ ೧೫೨.೩೭ ಕೋಟಿ ರೂಪಾಯಿಗಳನ್ನು ಮಾತ್ರ ನೀಡಿದ್ದಾರೆ, ಇದು ಬಹಳ ಕಡಿಮೆ ಆಯಿತು ಎಂದು ಹೇಳಿದ್ದಾರೆ. ಅಂದರೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಕ್ಕೂರತಕ್ಕ ಪರಿಹಾರ ಬಹಳ ಕಡಿಮೆ ಪ್ರಮಾಣದ್ದು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನು ತಮ್ಮನ್ನು ಕೇಳುತ್ತೇನೆ, ಏನೆಂದರೆ ನಮ್ಮ ರಾಜ್ಯದಲ್ಲಿ ಅತಿ ಬಡವರು ಯಾರಿದ್ದಾರೆ ಅವರಿಗೆ ನೀವು ಏನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂದು ಬರಗಾಲಕ್ಕೆ ತುತ್ತಾಗಿ ಜೀವನವನ್ನು ಸಾಗಿಸುವ ಸಲುವಾಗಿ ಸ್ವಂತ ಊರುಗಳನ್ನು ಬಿಟ್ಟು ಬೇರೆ ಬೇರೆ ಕಡೆಗಳಿಗೆ ವಲಸೆ ಹೋಗತಕ್ಕ ಜನರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಈ ರೀತಿ ವಲಸೆ ಹೋಗುವುದನ್ನು ತಪ್ಪಿಸಲು ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ ? ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿದಿದೆಯೇ ಎಂಬು—

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.